# ಕರ್ನಾಟಕ ವಿಧಾನ ಪರಿಷತ್ತು

**ವಿಷಯ:** ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯ ಮತ್ತು ಕಚೇರಿಗಳನ್ನು ಸ್ವಚ್ಛಗೊಳಿಸುವ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಹಣ ಪಾವತಿಸುವ ಬಗ್ಗೆ.

******

**ಓದಲಾಗಿದೆ:**

1. ಪತ್ರ ಸಂಖ್ಯೆ:ಕವಿಪ/ಕಾಕಾ/ಸ್ವಹೊಗುಕಾ/30/2024, ದಿನಾಂಕ:05.03.2024.
2. ಮೆ: ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು, ಇವರ ಇನ್‌ವಾಯ್ಸ್ ಬಿಲ್ ಸಂ:557, ದಿ:01.11.2025 ಮತ್ತು ಬಿಲ್ ಸಂ:559, ದಿ:01.12.2025.
3. ಕಡತ ಸಂ:ಕವಿಪ/ಕಾಕಾ/30/ಸ್ವಹೊಗುಕಾ/2025(ಭಾಗ-5), ಕಂಡಿಕೆ ಸಂಖ್ಯೆ:85 ರಿಂದ 89ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನ-1 ಮತ್ತು 5ರಲ್ಲಿ ಯಾಂತ್ರೀಕೃತ ಸ್ವಚ್ಛತಾ ಕಾರ್ಯನಿರ್ವಹಣೆ ಕಾರುಗಳ ಸ್ವಚ್ಛತೆ ಮತ್ತು ಭದ್ರತಾ ಕಾರ್ಯಗಳನ್ನು ನಿರ್ವಹಿಸಲು ದಿನಾಂಕ:01.01.2022 ರಿಂದ ಜಾರಿಗೆ ಬರುವಂತೆ ಮಾಡಿಕೊಳ್ಳಲಾಗಿರುವ ಕರಾರು ಒಪ್ಪಂದ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಂತೆ ಟೆಂಡರ್ ಪ್ರಕ್ರಿಯೆ ಮುಗಿದು ಹೊಸ ಗುತ್ತಿಗೆದಾರರನ್ನು ಆಯ್ಕೆ ಮಾಡುವವರೆಗೆ ವಿಧಾನ ಪರಿಷತ್ತಿನ ಸಚಿವಾಲಯದ ವಿಧಾನ ಸೌಧದ ಕೊಠಡಿಗಳ ಸ್ವಚ್ಚತಾ ಕಾರ್ಯಗಳ ಸೇವೆ ಒಳಗೊಂಡಂತೆ ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ನಂ.17/1, 2ನೇ ಮಹಡಿ, 1ನೇ ಕೆ ಬ್ಲಾಕ್, 11ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು-560010, ಇವರೊಂದಿಗೆ ಮುಂದುವರೆಸಲಾಗಿದೆ ಎಂದು ತಿಳಿಸಲಾಗಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು, ಇವರು 03 ಜನ ಸಫಾಯಿ ಕರ್ಮಚಾರಿಗಳು ಹಾಗೂ 07 ಜನ ಸ್ವಚ್ಛತಾಗಾರರು ವಿಧಾನಸೌಧದಲ್ಲಿರುವ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯ ಮತ್ತು ಕಚೇರಿಗಳನ್ನು ಸ್ವಚ್ಛಗೊಳಿಸುವ ಕಾರ್ಯಗಳನ್ನು ಅಕ್ಟೋಬರ್ ಮತ್ತು ನವೆಂಬರ್--2025ರ ಮಾಹೆಗಳಲ್ಲಿ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಒಟ್ಟು ರೂ.5,39,947/- (ಐದು ಲಕ್ಷದ ಮೂವತ್ತೊಂಬತ್ತು ಸಾವಿರದ ಒಂಭೈನೂರ ನಲವತ್ತೇಳು ರೂಪಾಯಿಗಳು ಮಾತ್ರ) (ಜಿ.ಎಸ್.ಟಿ ಮತ್ತು ಸೇವಾ ವೆಚ್ಚಗಳು ಮತ್ತು ಸ್ವಚ್ಛತಾ ಸಾಮಾಗ್ರಿಗಳು ಸೇರಿದಂತೆ)ಗಳ ಬಿಲ್ಲುಗಳನ್ನು ಸಲ್ಲಿಸಿ ಸದರಿ ಮೊತ್ತವನ್ನು ಪಾವತಿಸುವಂತೆ ಕೋರಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ(3)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯಗಳ ಸ್ವಚ್ಛತಾ ಕಾರ್ಯನಿರ್ವಹಣೆ ಮತ್ತು ಕಚೇರಿಗಳನ್ನು 03 ಜನ ಸಫಾಯಿ ಕರ್ಮಚಾರಿಗಳು, 07 ಜನ ಸ್ವಚ್ಛತಾಗಾರರು ಸ್ವಚ್ಛಗೊಳಿಸುವ ಕಾರ್ಯಗಳನ್ನು ಅಕ್ಟೋಬರ್ ಮತ್ತು ನವೆಂಬರ್-2025ರ ಮಾಹೆಗಳಲ್ಲಿ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ

ಒಟ್ಟು ರೂ.5.39.947/-(ಐದು ಲಕ್ಷದ ಮೂವತ್ತೊಂಭತ್ತು ಸಾವಿರದ ಒಂಭೈನೂರ ನಲವತ್ತೇಳು ರೂಪಾಯಿಗಳು ಮಾತ್ರ)ಗಳಲ್ಲಿ ನಿಯಮಾನುಸಾರ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕಟಾಯಿಸಿ ಉಳಿದ ಮೊತ್ತವನ್ನು ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು. ಇವರಿಗೆ ಪಾವತಿಸುವ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದನೆ ನೀಡಿರುತ್ತಾರೆ.

**ಆದೇಶ ಸಂಖ್ಯೆ: ಕವಿಪ/ಆ-1/106/ಹೊ.ಗು.ವೇತನ/2025-26,**
**ಬೆಂಗಳೂರು, ದಿನಾಂಕ: 17.01.2026**

ಮೇಲ್ಕಂಡ ಪ್ರಸ್ತಾವನೆಯ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯಗಳು ಮತ್ತು ಕಚೇರಿಗಳನ್ನು ಸ್ವಚ್ಛಗೊಳಿಸುವ ಕಾರ್ಯಗಳನ್ನು ಅಕ್ಟೋಬರ್ ಮತ್ತು ನವೆಂಬರ್-2025ರ ಮಾಹೆಗಳಲ್ಲಿ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಒಟ್ಟು ರೂ.5.39.947/-(ಐದು ಲಕ್ಷದ ಮೂವತ್ತೊಂಬತ್ತು ಸಾವಿರದ ಒಂಭೈನೂರ ನಲವತ್ತೇಳು ರೂಪಾಯಿಗಳು ಮಾತ್ರ)ಗಳಲ್ಲಿ ನಿಯಮಾನುಸಾರ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕಟಾಯಿಸಿ ಉಳಿದ ಮೊತ್ತವನ್ನು ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್. ಬೆಂಗಳೂರು. ಇವರಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ: "2011-02-104-2-01-037" ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

**( ಜ್ಯೋತಿ )**
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

<u>ಪ್ರತಿಗಳು:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಕಾರ್ಯದರ್ಶಿ-2ರವರ ಆಪ್ತ ಸಹಾಯಕರಿಗೆ, ಕವಿಪ.
5. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ/ಕಾರ್ಯಕಾರಿ ಶಾಖೆ, ಕವಿಪ.
6. ಆಂತರಿಕ ಆರ್ಥಿಕ ಸಲಹೆಗಾರರು,ಕವಿಮಂ
7. ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ, ಕವಿಪ.
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. **ಮೆ: ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, #17/1, 2ನೇ ಮಹಡಿ, ಮೊದಲನೇ "ಕೆ" ಬ್ಲಾಕ್, 11ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು-560 010.**
10. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.

******